ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ ಗೋಷ್ವಾರೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ-1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1911ನೆ ಇಸವಿ ಜೂ 30ರ ವರಿಗಿನ 2 ಸಾಲುಗಳಲ್ಲಿ ವಣಗೂರು ಬಳಿ ಬಿಸಲೆ ಘಾಟಿ ರಸ್ತೆಮೇಲೆ ಸುಂಕ ವಸೂಲ್ಮಾಡತಕ್ಕ ಹಕ್ಕು ಸಕಲೇಶಪುರದ ಅಸಿಸ್ಟೆಂಟ್ ಕಮಿಷ್ನರವರ ರೂಬುರೂಬು ಸಕಲೇಶಪುರದ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂ ಮಾಹೆ 21ನೆ ತಾರೀಖು ಸೋಮವಾರ ಹಗಲು 12 ಘಂಟೆಗೆ ಹರಾಜು ಮಾಡಲ್ಪಡುತ್ತೆ.

ಹೆಚ್ಚು ವಿಚಾರಕ್ಕೆ 1909ನೆ ಇಸವಿ ಜೂ ಮಾಹೆ 3ರ ಮಕ್ರುಂ ಮೈಸೂರು ಗೆಜೆಟ್ಟಿನ IIನೆ ಭಾಗದ 476—477ನೆ ಪುಟಗಳಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರ್ ನೋಡಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಅರ್ಕಲಗೂಡು-ಮಂಜರಾಬಾದ್-ಕೊಡ್ಲಿಪೇಟೆ ರಸ್ತೆಮೇಲೆ (ಮೈಸೂರು ಕಡೆ) 1909ನೆ ಜುಲೈ ಗುರ್ರೆ ಲಾಗಾಯಿತು 1911ನೆ ಜೂನ್ 30ರ ವರಿಗಿನ 2 ಸಾಲುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಸ್ವಾತಂತ್ರ್ಯವು ಸಕಲೇಶಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ರೂಬುರೂಬು ಸಕಲೇಶಪುರದ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂನ್ ಮಾಹೆ 21ನೆ ತಾರೀಖು ಸೋಮವಾರ 12 ಘಂಟೆಗೆ ಹರಾಜು ಮಾಡಲ್ಪಡುತ್ತೆ.

ಹೆಚ್ಚು ವಿಷಯಕ್ಕೆ 1909ನೆ ಜೂನ್ 3ನೆ ಮಕ್ರುಂ ಮೈಸೂರು ಗೆಜೆಟ್ಟಿನ IIನೆ ಭಾಗದಲ್ಲಿ 478-479ನೆ ಪುಟಗಳಲ್ಲಿ ಘಾಯಿಷಾಗಿರುವ ಅಸಲು ಇಸ್ತಿಹಾರನ್ನು ನೋಡಬೇಕು.

ನರಸಿಂಗರಾವ್ ಪೂರ್ಣಯ್ಯ,
ಘಾರ್ ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್ನಾಮೆ.

ತಾರೀಖು 7ನೆ ಜೂ ೧೯೦೯.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—ಡಿಸ್ಟ್ರಿಕ್ಟು ಮಜಕೂರು ನಗರ ತಾಲ್ಲೂಕು ರಿಕಾರ್ಡಿನಲ್ಲಿ ತಹಲ್ ವರಿಗೂ ಭದ್ರಪಡಿಸಲ್ಪಟ್ಟು ಇಟ್ಟು ಇರುವ ಸ ೧೮೩೩—34ನೆ ಸಾಲಿ ಲಾಗಾಯಿತು 1877—78 ಸಾಲ್ ವರಿಗಿನ ಕುಳುವಾರು ಚಿಟ್ಟೈಗೆಳನ್ನು ಈ ತಾರೀಖು ಲಾಗಾಯಿತು ಮೂರು ತಿಂಗಳು ಕಳೆದ ನಂತರ, ರೂಲ್ಸು ಪ್ರಕಾರ ಜಲಾಯಿಸಲ್ಪಡುತ್ತೆ. ಆದ್ದರಿಂದ ಅಪೇಕ್ಷೆಯುಳ್ಳವರು ಸದರಿ ವಾಯಿದೆ ಒಳಗೆ ಅರ್ಜಿ ಕೊಟ್ಟು ನಕಲ್ ಪಡಿಯಬಹುದು.

ಎ. ಮೃತ್ಯುಂಜಯ ಐಯ್ಯರ್,
ಘಾರ್ ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ :—ಸ ೧೯೦೯ನೆ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಜೂ ಆಖೈರು ವರಿಗೆ ಒಂದು ವರ್ಷ ಪರ್ಯಂತರ ಶಿವಮೊಗ್ಗ ಟವ್ನ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲುಮಾಡುವ ಹಕ್ಕನ್ನು 1909ನೆ ಇಸವಿ ಜೂ 21ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಶಿವಮೊಗ್ಗ ಟವ್ನ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಬರವರ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ 17ನೆ ಮಕ್ರುಂ ಮೈಸೂರು ಗೆಜೆಟ್ಟು IIನೆ ಭಾಗದ 483, 484ನೆ ಪುಟವನ್ನು ನೋಡತಕ್ಕದ್ದು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸ ೧೯೦೯ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು ಸನ್ 1910ನೆ ಇಸವಿ ಜೂನ್ ಆಖೈರ ವರಿಗೆ ಶಿಕಾರಿಪುರ ಟವನ್ ಮುನಿಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡತಕ್ಕ ಹಕ್ಕನ್ನು 1909ನೆ ಜೂನ್ ಮಾಹೆ ತಾರೀಖು 28ನೆ ಮಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ ಮತ್ತು ಶಿಕಾರಿಪುರದ ಟವನ್ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಟೋಲುಗಳು ಈ ಕೆಳಗೆ ನಮೂದಾಗುವ ದರಗಳ ಪ್ರಕಾರ ವಸೂಲ್ಮಾಡತಕ್ಕದ್ದು.

(1)	ಭರ್ತಿ ಗಾಡಿ ಒಂದಕ್ಕೆ ...	...	...	0	4 0
(2)	ಖಾಲಿ ಗಾಡಿ ಒಂದಕ್ಕೆ ...	...	...	0	1 0
(3)	ಹೇರು ಹೇರಿದ ಎತ್ತು ಆಥವಾ ಕುದುರೆ ಒಂದಕ್ಕೆ ...		...	0	0 6
(4)	ಪಿಟೋ ಕತ್ತೆ ಒಂದಕ್ಕೆ ...	...	...	0	0 3